ಪಳೆಂಕನೊಬ್ಬ ಪ್ರೀತಿಯಿಂದ, “ಯಾ ಮನಿಗೆಪಾ ಬೀಗಾ?” ಎಂದು ಮಾತನಾಡಿಸಿದರು. ಅವ ತನ್ನ ಮಾವನ ಹೆಸರು ಹೇಳಿದ. “ಅವರ ಮನಿ ಆ ಕಡೆ ಐತಿ. ಹಿಂಗ ಮ್ಯಾಗಡೆ ಹೋಗು. ಮುಂದ ಸಾಲಿ ಬರತೈತಿ. ಬಾಜೂನ ದೊಡ್ಡ ಕೆರಿ ಐತಿ. ಕೆರೆಯಂಗಳದಲ್ಲಿ ಹಾದು ಹೋದರೆ ಸಿಗುವ ಮೊದಲನೆಯ ಕೆಂಪು ಹಂಚಿನ ಮನೀನ ಅವರದು” ಎಂದು ಕಳಿಸಿದ. ಅದರಂತೆ ಅಳಿಯ ಹೊರಟ. ಕಚ್ಚಾ ರಸ್ತೆ ದಾಟಿ, ಕೆರೆಯಂಗಳದಲ್ಲಿನ ಮುಳ್ಳು, ಕಲ್ಲು, ಕಂಟಿ, ಕೆಸರು ಜಿಗಿಯುತ್ತ ಓಣಿಗೆ ಬಂದ. ಜನರು ಕಾಣುತ್ತಿಲ್ಲ. ದೊಡ್ಡ ಬೇವಿನ ಗಿಡದ ಕೆಳಗೆ ದನದ ಎಲುವುಗಳು ಬಿದ್ದಿವೆ. ಕೆಲವು ನಾಯಿಗಳು ‘ಗುರ‍್ರ ಗುರ‍್ರ’ ಎನ್ನುತ್ತ ಆ ಎಲುಬುಗಳನ್ನು ಕಡಿಯುತ್ತಲಿವೆ. ಗಿಡದಲ್ಲಿ ಕಾಗೆ, ಹದ್ದುಗಳ ಜಾತ್ರೆ ಸೇರಿದೆ. ಅಲ್ಲಲ್ಲಿ ಸಣ್ಣಮನೆ ಗುಡಿಸಲುಗಳು. ಮನೆಗಳ ಮುಂದೆ ಅಲ್ಲಲ್ಲಿ ಆಡು, ಕುರಿಗಳನ್ನು ಕಟ್ಟಿದ್ದಾರೆ. ಹುಂಜ, ಕೋಳಿ, ಪಿಳ್ಳೆಗಳು ತಿಪ್ಪೆಗೆ ಬರುತ್ತಿವೆ. ಪಕ್ಕದಲ್ಲೇ ತುಸು ದೊಡ್ಡದೆನ್ನಬಹುದಾದ ಕೆಂಪು ಹಂಚಿನ ಮನೆ ಕಾಣಿಸಿತು. ಇದೆ ಮಾವನ ಮನೆ ಎಂದುಕೊಂಡು ಅತ್ತ ಸಾಗಿದ. ಪಕ್ಕ ಮುದಿ ನಾಯಿಯೊಂದು ಎಕ್ಕೆ ಗಿಡದ ಕೆಳಗೆ ತೇಕುತ್ತ ಬಿದ್ದಿತ್ತು. ಮನೆಯ ಮುಂದೆ ಚರ್ಮದ ತುಂಡುಗಳು, ಹಜಾರಿನಲ್ಲಿ ನೊಣಗಳ ಜಾತ್ರೆ ಇದೆ. ‘ಇದೇನಿದು ಬೇರೆ ಕೇರಿ ಇದ್ದಂಗೈತೆಲ್ಲ!’ ಎಂದುಕೊಂಡು ಅಳುಕುತ್ತ, “ಮಾವಾ” ಎಂದು ಕೂಗಿದ.

“ಯಾರು?” ಎನ್ನುತ್ತ ಉಟ್ಟ ಬಟ್ಟೆಗೆ ಹತ್ತೆಂಟು ಗಂಟು ಹಾಕಿಕೊಂಡ ಮುದುಕ ಹೊರ ಬಂದ.

ಬಾಗಿಲಲ್ಲಿ ನಿಂತವನನ್ನು ನೋಡಿ ಗಾಬರಿಯಾಗಿ, “ಯಾರ‍್ರಿ ಎಪ್ಪಾ ನೀವು, ಯಾರು ಬೇಕಾಗಿತ್ತು?” ಕೇಳಿದ.

“ಚನಬಸಪ್ಪ ಮಾವಾ ಇಲ್ಲಾ?” ಎಂದ.

“ನಾನಃರೀ ಎಪ್ಪಾ ಚನಬಸಪ್ಪ, ನೀವು ಯಾರ‍್ರೀ?” ಎಂದು ಪ್ರಶ್ನಿಸಿದ.

“ನಾನು ನಿಮ್ಮ ಮಗಳ ಗಂಡ” ಎಂದ.

“ನನ್ನ ಮಗಳ ಗಂಡ!” ಆಶ್ಚರ್ಯಚಕಿತನಾಗಿ

“ಮೂಲಿಮನಿ ಚನಬಸಪ್ಪ ಸಾಹುಕಾರ ಇರಬೇಕು ನೋಡ್ರಿ” ಎಂದದ್ದಕ್ಕೆ ಹೂಂಗುಟ್ಟಿದ.

“ಅವರ ಮನಿ ಊರಾಗ ಐತ್ರಿ, ನೀವು ಇಲ್ಲಿಗ್ಯಾಕ ಬಂದ್ರಿ?” ಕೇಳಿದ.

“ಅಗಸ್ಯಾಗ ಕುಂತವರು ಇಲ್ಲಿಗೆ ಕಳಿಸಿದರಪಾ” ಎಂದ.

“ನೀವು ಫಲೆಂಕರ ಕೈಗೆ ಸಿಕ್ಕೀರಿ, ನಗಚಾಟಿ ಮಾಡಿ ಫಜೀತಿಗೆ ಹಾಕ್ಯಾರು. ಬರ‍್ರಿ ನಾ ಚನಬಸಪ್ಪ ಸಾಹುಕಾರ ಮನಿಗೆ ಕರಕೊಂಡು ಹೋಗತೇನಿ” ಎಂದು ಮುಂದೆ ನಡೆದ.

“ಎಂಥಾ ಸುಮಾರ ಅದಾರೊ ಮಾರಾಯ ನಿಮ್ಮೂರ ಮಂದಿ. ಅರೆದವರಿಗೆ ಹಿಂಗ ಮಾಡೂದ?” ಎನ್ನುತ್ತ ಅವನ ಹಿಂದಿಂದೆ ನಡೆದ.


## ವೀರಭದ್ರ ಕೌದಿ

ಮೂಲತಃ ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ದೊಡ್ಡವಾಡ ಗ್ರಾಮದವರು. ತಾಳಿಕೋಟಿ(ವಿಜಯಪುರ ಜಿಲ್ಲೆ)ಯ ಶ್ರೀ ಖಾಸ್ಗತೇಶ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ನಿವೃತ್ತರು. ಪ್ರಸ್ತುತ ಬೈಲಹೊಂಗಲದಲ್ಲಿ ನೆಲೆಸಿದ್ದಾರೆ. ಕವಿತೆ, ನಾಟಕ, ಚುಟುಕು, ಶಾಯರಿ, ಸಣ್ಣಕಥೆಗಳನ್ನು ಬರೆದಿದ್ದಾರೆ. ‘ಬರ ಮತ್ತು ಹತ್ತು ಕಥೆಗಳು’ ಹಾಗೂ ‘ಒಂದು ಹೆಣದ ಸುತ್ತಮುತ್ತ’ ಪ್ರಮುಖ ಕಥಾಸಂಕಲನಗಳು.